# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 680 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | : 12.03.2025 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುತ್ತಿರುವ ಪ್ರೋತ್ಸಾಹ ಧನ ಎಷ್ಟು; ಕಳೆದ ಎರಡು ವರ್ಷದಿಂದ ಎಷ್ಟು ಫಲಾನುಭವಿಗಳಿಗೆ ಎಷ್ಟು ಪ್ರೋತ್ಸಾಹ ಧನ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಹಾಲು ಉತ್ಪಾದಕರಿಗೆ ಪ್ರತೀ ಲೀಟರ್ ಗುಣ ಮಟ್ಟದ ಹಾಲಿಗೆ ರೂ.5/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಕಳೆದ ಎರಡು ವರ್ಷದಿಂದ ಪಾವತಿಸಿರುವ ಪ್ರೋತ್ಸಾಹಧನ ಮತ್ತು ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಹಾಲು ಉತ್ಪಾದಕರ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ನೀಡಲು ಬಾಕಿ ಇರುವ ಮೊತ್ತ ಎಷ್ಟು; (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು) | ಹಾಲು ಉತ್ಪಾದಕ ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡಲು ಬಾಕಿ ಇರುವ ಮೊತ್ತ ರೂ.656.07 ಕೋಟಿಗಳು ಜಿಲ್ಲಾವಾರು ವಿವರ **ಅನುಬಂಧ-2** ರಲ್ಲಿನೀಡಲಾಗಿದೆ. |
| ಇ) | ಪ್ರತಿ ತಿಂಗಳೂ ಪ್ರೋತ್ಸಾಹ ಧನ ಪಾವತಿ ಮಾಡಲು ಸರ್ಕಾರಕ್ಕೆ ಇರುವ ತೊಡಕುಗಳೇನು; ಪ್ರೋತ್ಸಾಹ ಧನ ಪಾವತಿ ಮಾಡದ ಕಾರಣ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2019-20ನೇ ಸಾಲಿನಲ್ಲಿ ಪ್ರತಿ ದಿನ ಸರಾಸರಿ 75.96 ಲಕ್ಷ ಲೀಟರ್, 2020-21 ಕ್ಕೆ 78.74 ಲಕ್ಷ ಲೀಟರ್, 2021-22 ಕ್ಕೆ 81.66 ಲಕ್ಷ ಲೀಟರ್, 2022-23 ಕ್ಕೆ 80.32 ಲಕ್ಷ ಲೀಟರ್, 2023-24 ಕ್ಕೆ 82.93 ಲಕ್ಷ ಲೀಟರ್ ಹಾಗು 2024-25 ನೇ ಸಾಲಿಗೆ ಪ್ರತಿ ದಿನ ಸರಾಸರಿ 90 ರಿಂದ 95 ಲಕ್ಷ ಲೀಟರ್ ಹಾಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿನಿಯಮಿತದಿಂದ ಸಂಗ್ರಹಣೆಯಾಗುತ್ತಿದೆ. ಈ ರೀತಿ ಪ್ರತಿ ವರ್ಷ ಹಾಲಿನ ಶೇಖರಣೆಯಲ್ಲಿ ಗಮನಾರ್ಹ ಹೆಚ್ಚಾಳವಾಗುತ್ತಿದ್ದು, ಹೆಚ್ಚಳವಾಗುತ್ತಿರುವ ಹಾಲಿನ ಶೇಖರಣೆಗೆ ಅನುಗುಣವಾಗಿ ಆಯವ್ಯಯದಲ್ಲಿ ಅನುದಾನ ನಿಗದಿಯಾಗದೇ ಇರುವುದರಿಂದ ಪ್ರೋತ್ಸಾಹಧನ ಪಾವತಿಗೆ ಬಾಕಿ ಉಳಿಯುತ್ತಿದೆ.<br><br>2019-20 ನೇ ಸಾಲಿನಲ್ಲಿ ರೂ.54.88 ಕೋಟಿ, 2020-21 ನೇ ಸಾಲಿಗೆ ರೂ.101.54 ಕೋಟಿ, 2021-22 ನೇ ಸಾಲಿಗೆ ರೂ.129.05 ಕೋಟಿ, 2022-23 ರಲ್ಲಿ ರೂ.208.58 ಕೋಟಿ, 2023-24 ನೇ ಸಾಲಿಗೆ ರೂ.202.85 ಕೋಟಿ ಪ್ರೋತ್ಸಾಹಧನ |

| | | |
|---|---|---|
| | | ಪಾವತಿಗೆ ಬಾಕಿ ಉಳಿದಿರುತ್ತದೆ. ಈ ರೀತಿ ಹಾಲಿನ ಪ್ರೋತ್ಸಾಹಧನ ಪಾವತಿಗೆ ಪ್ರತಿ ವರ್ಷ ಬಾಕಿ ಉಳಿಯುತ್ತಿದೆ. ಪ್ರತಿ ವರ್ಷ ಬಿಡುಗಡೆಯಾದ ಅನುದಾನದಲ್ಲಿ, ಆದ್ಯತೆಯ ಮೇರೆಗೆ ಹಿಂದಿನ ಸಾಲಿನ ಬಾಕಿಯಿದ್ದ ಪ್ರೋತ್ಸಾಹಧನ ಪಾವತಿಸುವುದರಿಂದ ಅದೇ ಆರ್ಥಿಕ ಸಾಲಿನ ಪ್ರೋತ್ಸಾಹಧನ ಪಾವತಿಗೆ ಅನುದಾನ ಕೊರತೆಯಾಗುತ್ತಿರುವುದರಿಂದ ವಿಳಂಬವಾಗುತ್ತಿದೆ.<br><br>ಪ್ರಸಕ್ತ 2024-25ನೇ ಸಾಲಿನಲ್ಲಿ ರೂ.1300.00 ಕೋಟಿ ಹಾಗು ಹೆಚ್ಚುವರಿಯಾಗಿ ಬಿಡುಗಡೆಯಾದ ಅನುದಾನ ರೂ.200.00 ಕೋಟಿ, ರೂ.1500.00 ಕೋಟಿಗಳ ಅನುದಾನದಲ್ಲಿ ಹಿಂದಿನ ಸಾಲುಗಳ ಬಾಕಿಯಿದ್ದ ರೂ.614.24 ಕೋಟಿ ಪ್ರೋತ್ಸಾಹಧನ ಪಾವತಿಸಿದ ನಂತರ ಪ್ರಸಕ್ತ ಸಾಲಿನ ಪ್ರೋತ್ಸಾಹಧನ ರೂ.885.76 ಕೋಟಿ ಪಾವತಿಸಲಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ರೂ.656.07 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಉಳಿದಿದೆ. ಪ್ರೋತ್ಸಾಹಧನ ಪ್ರತಿ ತಿಂಗಳು ಪಾವತಿಸದೇ ಇರುವುದರಿಂದ ರೈತರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಈ) | ಹಾಗಿದ್ದರೆ, ರೈತರಿಗೆ ಬಾಕಿ ಇರುವ ಪ್ರೋತ್ಸಾಹ ಧನವನ್ನು ಯಾವ ಕಾಲಮಿತಿಯೊಳಗೆ ಪಾವತಿ ಮಾಡಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದ) | ಬಾಕಿ ಇರುವ ಪ್ರೋತ್ಸಾಹಧನ ನೀಡುವ ಸಂಬಂಧ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಅನುದಾನ ಬಿಡುಗಡೆಯನುಸಾರ ಕ್ರಮವಹಿಸಬೇಕಿರುತ್ತದೆ. |

ಸಂಖ್ಯೆ: ಪಸಂಮೀ 16 ಕಹಾಮ 2025

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# <u>ಅನುಬಂಧ-1</u>

ಕಳೆದ ಎರಡು ವರ್ಷದಿಂದ ಪಾವತಿಸಿರುವ ಪ್ರೋತ್ಸಾಹಧನ ಮತ್ತು
ಫಲಾನುಭವಿಗಳ ಜಿಲ್ಲಾವಾರು ಮಾಹಿತಿ

**(ರೂ.ಕೋಟಿಗಳಲ್ಲಿ)**

| **ಕ್ರ.ಸಂ** | **ಜಿಲ್ಲೆ** | ಫಲಾನುಭವಿಗಳ ಸಂಖ್ಯೆ (ಮಾಹೆಯಾನ) | 2023-24ನೇ ಸಾಲಿಗೆ ಪಾವತಿಸಿರುವ ಮೊತ್ತ | 2024-25 ನೇ ಸಾಲಿಗೆ ಪಾವತಿಸಿರುವ ಮೊತ್ತ |
|---|---|---|---|---|
| 1 | ವಿಜಯಪುರ | 4519 | 5.12 | 8.67 |
| 2 | ಬಾಗಲಕೋಟೆ | 15657 | 20.00 | 25.61 |
| 3 | ಬಳ್ಳಾರಿ | 1384 | 0.93 | 3.26 |
| 4 | ರಾಯಚೂರು. | 3553 | 3.58 | 5.58 |
| 5 | ಕೊಪ್ಪಳ | 11100 | 8.86 | 15.19 |
| 6 | ವಿಜಯನಗರ | 16364 | 12.75 | 21.36 |
| 7 | ಬೆಳಗಾವಿ | 31495 | 24.46 | 35.83 |
| 8 | ಬೆಂಗಳೂರುನಗರ | 17664 | 42.36 | 45.71 |
| 9 | ಬೆಂಗಳೂರು (ಗ್ರಾ) | 34379 | 60.54 | 79.50 |
| 10 | ರಾಮನಗರ. | 57011 | 123.65 | 145.37 |
| 11 | ಚಾಮರಾಜನಗರ | 32517 | 23.84 | 40.68 |
| 12 | ಕೋಲಾರ. | 42358 | 82.99 | 89.39 |
| 13 | ಚಿಕ್ಕಬಳ್ಳಾಪುರ | 39601 | 51.22 | 65.45 |
| 14 | ಕಲಬುರ್ಗಿ | 4375 | 3.22 | 6.42 |
| 15 | ಬೀದರ್ | 5584 | 4.03 | 9.65 |
| 16 | ಯಾದಗಿರಿ | 170 | 0.29 | 1.53 |
| 17 | ಶಿವಮೊಗ್ಗ | 35217 | 37.59 | 48.05 |
| 18 | ದಾವಣಗೆರೆ | 34807 | 34.26 | 43.04 |
| 19 | ಚಿತ್ರದುರ್ಗ | 19421 | 20.21 | 25.80 |
| 20 | ದಕ್ಷಿಣಕನ್ನಡ | 29093 | 44.77 | 42.74 |
| 21 | ಉಡುಪಿ | 22877 | 33.10 | 27.51 |
| 22 | ಧಾರವಾಡ | 11973 | 6.84 | 10.65 |
| 23 | ಗದಗ | 7765 | 10.28 | 5.97 |
| 24 | ಉತ್ತರಕನ್ನಡ | 11251 | 13.62 | 7.50 |
| 25 | ಹಾವೇರಿ | 23686 | 6.56 | 23.67 |
| 26 | ಹಾಸನ. | 84583 | 129.66 | 185.69 |
| 27 | ಚಿಕ್ಕಮಗಳೂರು | 15776 | 17.58 | 25.81 |
| 28 | ಕೊಡಗು. | 2418 | 2.65 | 3.80 |
| 29 | ಮಂಡ್ಯ | 101266 | 126.65 | 175.68 |
| 30 | ಮೈಸೂರು. | 103200 | 112.79 | 139.75 |
| 31 | ತುಮಕೂರು. | 83483 | 97.40 | 134.73 |
| | **ಒಟ್ಟು** | **904547** | **1161.80** | **1499.59** |

# ಅನುಬಂಧ-2

2024-25ನೇ ಸಾಲಿಗೆ ಪಾವತಿಗೆ ಬಾಕಿ ಇರುವ ಪ್ರೋತ್ಸಾಹಧನದ ಜಿಲ್ಲಾವಾರು ವಿವರ

**(ರೂ.ಕೋಟಿಗಳಲ್ಲಿ)**

| **ಕ್ರ.ಸಂ** | **ಜಿಲ್ಲೆ** | ಪಾವತಿಗೆ ಬಾಕಿ ಇರುವ ಪ್ರೋತ್ಸಾಹಧನದ ಮೊತ್ತ |
|---|---|---|
| 1 | ಬಾಗಲಕೋಟೆ | 6.450 |
| 2 | ಬಳ್ಳಾರಿ | 0.630 |
| 3 | ಬೆಳಗಾವಿ | 19.280 |
| 4 | ಬೆಂಗಳೂರುನಗರ | 31.850 |
| 5 | ಬೆಂಗಳೂರುಗ್ರಾಮಾಂತರ | 37.950 |
| 6 | ಬೀದರ್ | 2.590 |
| 7 | ಚಾಮರಾಜನಗರ | 15.920 |
| 8 | ಚಿಕ್ಕಬಳ್ಳಾಪುರ | 32.210 |
| 9 | ಚಿಕ್ಕಮಗಳೂರು | 9.430 |
| 10 | ಚಿತ್ರದುರ್ಗ | 11.430 |
| 11 | ದಕ್ಷಿಣಕನ್ನಡ | 16.770 |
| 12 | ದಾವಣಗೆರೆ | 18.470 |
| 13 | ಧಾರವಾಡ | 4.910 |
| 14 | ಗದಗ | 2.840 |
| 15 | ಹಾಸನ | 71.380 |
| 16 | ಹಾವೇರಿ | 10.440 |
| 17 | ಕಲಬುರಗಿ | 2.045 |
| 18 | ಕೊಡಗು | 1.084 |
| 19 | ಕೋಲಾರ | 46.800 |
| 20 | ಕೊಪ್ಪಳ | 4.149 |
| 21 | ಮಂಡ್ಯ | 87.730 |
| 22 | ಮೈಸೂರು | 46.750 |
| 23 | ರಾಯಚೂರು | 1.489 |
| 24 | ರಾಮನಗರ | 61.750 |
| 25 | ಶಿವಮೊಗ್ಗ | 21.280 |
| 26 | ತುಮಕೂರು | 63.050 |
| 27 | ಉಡುಪಿ | 10.576 |
| 28 | ಉತ್ತರಕನ್ನಡ | 3.242 |
| 29 | ವಿಜಯನಗರ | 9.330 |
| 30 | ವಿಜಯಪುರ | 4.142 |
| 31 | ಯಾದಗಿರಿ | 0.108 |
| | **ಒಟ್ಟು** | **656.075** |